**File No.LNA-11/17/2016-GADAG-LND_RD-GADAG DC**

ಅನುಬಂಧ-5

ಕ್ರಸಂ:ಎಲ್.ಎನ್.ಎ.:ಸಿಆರ್/11 /2016-17

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಗದಗ, ದಿನಾಂಕ: 7 -09-2016.

## ಅಧೀಕೃತ ಜ್ಞಾಪನ

ವಿಷಯಃ ಗದಗ ಜಿಲ್ಲೆ ಶಿರಹಟ್ಟಿ ತಾಲೂಕಾ ಲಕ್ಷ್ಮೇಶ್ವರ ಹೋಬಳಿ ಹಿರೇಬಣ ಗ್ರಾಮದ ರಿ.ಸ.ನಂ. 356/4 ಕ್ಷೇತ್ರ 08 ಎ-37 ಗುಂಟೆ ಮತ್ತು 356/5 ಕ್ಷೇತ್ರ 03 ಎ-0 ಗುಂಟೆ ಮತ್ತು 357/2 ಕ್ಷೇತ್ರ 03 ಎ-23 ಗುಂಟೆ ಮತ್ತು 357/11 ಕ್ಷೇತ್ರ 0 ಎ-10 ಗುಂಟೆ ಒಟ್ಟು 15 ಎ-30 ಗುಂಟೆ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲು ಶ್ರೀ ಸಣ್ಣಪ್ಪ ತಂದಿ ಕಳಕಪ್ಪ ಉಮುಚಗಿ ಸಾ: ಬಸ್ತಿಬಣ ತಾ: ಶಿರಹಟ್ಟಿ ಇವರ ಅರ್ಜಿ ದಿ: 06-11-2015.

ಉಲ್ಲೇಖಃ
1) ತಹಶೀಲದಾರ ಶಿರಹಟ್ಟಿ ಇವರ ವರದಿ ನಂ.ಎಲ್.ಎನ್.ಎ.ಸಿಆರ್:06/2016-17 ದಿನಾಂಕ: 13-06-2016.
2) ಭೂ ಪರಿವರ್ತನಾ ಶುಲ್ಕ ರೂ. 343350=00 ( ಮೂರು ಲಕ್ಷ ನಲವತ್ತ ಮೂರು ಸಾವಿರ ಮೂರ ನೂರ ಐವತ್ತು ರೂ ಮಾತ್ರ) ಪೋಡಿ ಫೀ ರೂ: 22050-00 (ಇಪ್ಪತ್ತ ಎರಡು ಸಾವಿರ ಐವತ್ತು ರೂ ಮಾತ್ರ) ಒಟ್ಟು ರೂ.365400-00 (ಮೂರು ಲ್ಲಕ್ಷ ಅರವತ್ತ ಐದು ಸಾವಿರ ನಾಲ್ಕ ನೂರ ರೂ ಮಾತ್ರ) ಗಳನ್ನು ಚಲನ ನಂ:46 ಮತ್ತು 47 ರಲ್ಲಿ ದಿನಾಂಕ: 30-08-2016 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಗದಗ ಇವರಲ್ಲಿ ಸರಕಾರಕ್ಕ ಭರಣಾ ಮಾಡಿರುತ್ತಾರೆ.

******

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95(2), 95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994 ರ ನಿಯಮ 107(1) ರಂತೆ ವಸತಿ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ. 21780/- (ಇಪ್ಪತ್ತ ಒಂದು ಸಾವಿರ ಎಳನೂರ ಎಂಬತ್ತು ರೂ ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ(2) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಶ್ರೀ ಸಣ್ಣಪ್ಪ ತಂದಿ ಕಳಕಪ್ಪ ಉಮುಚಗಿ ಸಾ: ಬಸ್ತಿಬಣ ತಾ: ಶಿರಹಟ್ಟಿ ಇವರ ಅರ್ಜಿಯನ್ನು ಪರಿಗಣಿಸಿ ಶಿರಹಟ್ಟಿ ತಾಲೂಕಾ ಲಕ್ಷ್ಮೇಶ್ವರ ಹೋಬಳಿ ಹಿರೇಬಣ ಗ್ರಾಮದ ರಿ.ಸ.ನಂ: 356/4 ಕ್ಷೇತ್ರ 08 ಎ-37 ಗುಂಟೆ ಮತ್ತು 356/5 ಕ್ಷೇತ್ರ 03 ಎ-0 ಗುಂಟೆ ಮತ್ತು 357/2 ಕ್ಷೇತ್ರ 03 ಎ-23 ಗುಂಟೆ ಮತ್ತು 357/11 ಕ್ಷೇತ್ರ 0 ಎ-10 ಗುಂಟೆ, ಒಟ್ಟು 15 ಎ-30 ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

ಷರತ್ತುಗಳುಃ

1) ಈ ಭೂಮಿಯು ವಸತಿ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿ/ಮಾಲಿನ್ಯ ನಿಯಂತ್ರಣ ಮಂಡಳಿ/ ಗ್ರಾಮ ಪಂಚಾಯತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರರಿಗೆ ಯಾವುದೆ ಹಕ್ಕನ್ನು ನೀಡುವುದಿಲ್ಲ.
2) ಭೂ ಪರಿವರ್ತಿತ ಜಮೀನನ್ನು ವಸತಿ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
3) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಿಗೆ ಇತ್ಯಾದಿಗಳನ್ನು ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ/ ನಗರಾಭಿವೃದ್ಧಿ ಪ್ರಾಧಿಕಾರ ಗದಗ-ಬೆಟಗೇರಿ ರವರಿಂದ ಬಡಾವಣೆ ನಕ್ಷೆ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟುವುದು. ಸದರಿ ಜಮೀನಿನಲ್ಲಿ ಬಡಾವಣೆ ನಕ್ಷೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.
4) ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ/ ನಗರಾಭಿವೃದ್ಧಿ ಪ್ರಾಧಿಕಾರ ಗದಗ-ಬೆಟಗೇರಿ ಇವರು ನಾಗರಿಕ ಸೌಲಭ್ಯ/ಉದ್ಯಾನ ವಗೈರೆ ಒಂದೇ ಯುನಿಟ್ ಆಗಿ ಪ್ರಮುಖ ಸ್ಥಳದಲ್ಲಿ ಮೀಸಲಿಡಬೇಕು.

5) ಇತರ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ, ಇಲಾಖೆ ಗದಗ-ಬೆಟೇರಿ (ಪ್ರಾಧಿಕಾರ/ನಗರ ಪಾಲಿಕೆ/ಇತ್ಯಾದಿ) ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ

6) ಸಾರ್ವಜನಿಕ ಹಿತ ದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸದೇ ವಿದ್ಯುಚ್ಛಕ್ತಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸದೇ ಯಾವುದೇ ರೀತಿ ಪರಭಾರೆ ಮಾಡತಕ್ಕದ್ದಲ್ಲ.

ಈ ಜಮೀನಿನಲ್ಲಿ ತಾಕು ಪೋಟ್ ಖರಾಬ (ಬ ಖರಾಬ) ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ

7) ಈ ಜಮೀನಿನಲ್ಲಿ ತಾಕು ಪೋಟ್ ಖರಾಬ ಜಮೀನು ಕಾಯ್ದಿರಿಸತಕ್ಕದ್ದು ಹಾಗೂ ಇದನ್ನು ಸಾರ್ವಜನಿಕ 1964 ರ ಕಲಂ 67 ರಂತೆ ಸರಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು ಹಾಗೂ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಾಗಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ ಬಾಬ್ತು ಬಡಾವಣೆ ನಕ್ಷೆಯಲ್ಲಿ ಕಾಯ್ದಿರಿಸತಕ್ಕದ್ದು.

8) ಸರಕಾರದ ಆದೇಶ ಸಂಖ್ಯೆ: ಪಿ.ಡಬ್ಲೂಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರಕಾರದ ಸಾರಿಗೆ ಇಲಾಖೆಯ ಪತ್ರದ ನಂ: ಪಿ1:7(11)67 ದಿನಾಂಕ: 1/1/1996 ರಂತೆ ಈ ಜಮೀನಿನಲ್ಲಿ ಕಟ್ಟಡ ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮತ್ತು ಜಿಲ್ಲಾ ಮುಖ್ಯ ರಸ್ತೆಗೆ ಸಂಬಂಧಿಸಿದಂತೆ 25 ಮೀಟರಗಳ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9) ಈ ಭೂ ಪರಿವರ್ತನ ಜಮೀನಿನಲ್ಲಿ ಯಾವುದೇ ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸತಕ್ಕದ್ದಲ್ಲ.

10) 2 (ಎರಡು) ವರ್ಷದೊಳಗಾಗಿ ವಸತಿ ಉದ್ದೇಶಕ್ಕಾಗಿ ಅಭಿವೃದ್ಧಿ ಪಡಿಸಿಕೊಳ್ಳಬೇಕು.

11) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು. ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

12) ಕೆ.ಪಿ.ಟಿ.ಸಿ.ಎಲ್. ಇವರಿಗೆ ವಿದ್ಯುತ ಲೈನ ಹಾಕಲು ಅವಶ್ಯಕವಿರುವ ಜಾಗವನ್ನು ಮೀಸಲಿರಿಸಿ ಬಾಕಿ ಉಳಿದ ಜಮೀನಿಗೆ ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಗದಗ-ಬೆಟಗೇರಿ ಇವರು ಬಡಾವಣೆ ನಕ್ಷೆ ಅನುಮೋದಿಸಲು ಕ್ರಮ ಜರುಗಿಸುವುದು.

13) ಈ ಕಛೇರಿಗೆ ಭೂ ಪರಿವರ್ತನೆ ಪಡೆಯಲು ಸಲ್ಲಿಸಿರುವ ದಾಖಲೆಗಳನ್ನು ಹಾಗೂ ವರದಿಗಳನ್ನು ಆಧರಿಸಿ ಭೂ ಪರಿರ್ತನೆ ಮಂಜೂರಾತಿ ನೀಡಲಾಗಿದ್ದು, ಇದರಲ್ಲಿ ಉದ್ದೇಶ ಪೂರ್ವಕವಾಗಿ ಯಾವುದೇ ದಾಖಲೆಗಳನ್ನು ಹಾಜರ ಪಡಿಸಿದೇ ಅಥವಾ ಕೊಟ್ಟಿ ದಾಖಲೆಗಳನ್ನು ಸಲ್ಲಿಸಿ ಕಾನೂನು ಉಲ್ಲಂಘನೆ ಆಗಿರುವುದು ಕಂಡುಬಂದಲ್ಲಿ ಈ ಆದೇಶ ತಂತಾನಾಗಿ ರದ್ದಾಗುತ್ತದೆ.

ಷೆಡ್ಯೂಲ್ ವಿವರ :-

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಾ ಲಕ್ಷ್ಮೇಶ್ವರ ಹೋಬಳಿ ಹಿರೇಬಣ ಗ್ರಾಮದ ರಿ.ಸ.ನಂ: 356/4 ಕ್ಷೇತ್ರ 08 ಎ-37 ಗುಂಟೆ ಮತ್ತು 356/5 ಕ್ಷೇತ್ರ 03 ಎ-0 ಗುಂಟೆ ಮತ್ತು 357/2 ಕ್ಷೇತ್ರ 03 ಎ-23 ಗುಂಟೆ ಮತ್ತು 357/11 ಕ್ಷೇತ್ರ 0 ಎ-10 ಗುಂಟೆ ಒಟ್ಟು 15 ಎ-30 ಗುಂಟೆ ವ್ಯವಸಾಯದ ಜಮೀನನ್ನು ವಸತಿ ಉದ್ದೇಶದ ಭೂ ಪರಿವರ್ತಿತ ಜಮೀನಿನ ಚಕ್ಕ ಬಂದಿ :

ಪೂರ್ವಕ್ಕೆ:- ರಾಮಣ್ಣ ಮೆಣಸಿನಕಾಯಿ ಇವರ ಜಮೀನು

ಪಶ್ಚಿಮಕ್ಕೆ:- ಈರನಗೌಡ್ರ ಗುಂಡೆಗೌಡ್ರ ಇವರ ಜಮೀನು ಮತ್ತು ರಸ್ತೆ

ಉತ್ತರಕ್ಕೆ: ಕಳಕಪ್ಪ ಉಮಚಗಿ ಇವರ ಜಮೀನು

ದಕ್ಷಿಣಕ್ಕೆ:- ಬೆಂಗಳೂರ ಬಸಣ್ಣ ಇವರ ರಸ್ತೆ

ಜಿಲ್ಲಾಧಿಕಾರಿಗಳು
ಗದಗ ಜಿಲ್ಲೆ,ಗದಗ.

File No.LNA-11/17/2016-GADAG-LND_RD-GADAG DC

1) ತಹಶೀಲದಾರ ಶಿರಹಟ್ಟಿ ಇವರಿಗೆ ಮೂಲ ಕಡತ ಹಾಗೂ ಚಲನ್ ದೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ರಿ.ಸ.ನಂ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ. ಯಲ್ಲಿ ನಮೂದಿಸತಕ್ಕದ್ದು.
2) ಸಹಾಯಕ ನಿರ್ದೇಶಕರು, ನಗರ ಹಾಗೂ ಗ್ರಾಮಾಂತರ ಯೋಜನಾ ಇಲಾಖೆ ಗದಗ/ ಮುಖ್ಯಾಧಿಕಾರಿಗಳು ಪುರಸಭೆ ಲಕ್ಷ್ಮೇಶ್ವರ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3) ಉಪವಿಭಾಗಾಧಿಕಾರಿಗಳು ಗದಗ/ ಉಪ-ನಿರ್ದೇಶಕರು ಭೂ ದಾಖಲೆಗಳು ಗದಗ ಇವರಿಗೆ-
4) ಶ್ರೀ ಸಣ್ಣಪ್ಪ ತಂದಿ ಕಳಕಪ್ಪ ಉಮುಚಗಿ ಸಾ: ಬಸ್ತಿಬಣ ತಾ: ಶಿರಹಟ್ಟಿ ಇವರಿಗೆ ದೃಢೀಕೃತ ಅಂಚೆ ಮೂಲಕ
5) ಹೆಚ್ಚಿನ ಪ್ರತಿ

Signature valid
Digitally signed by N S PRASANNA KUMAR
Date: 2016.09.07 [illegible]:40 IST
Reason: Approved

ಅಪರ ಜಿಲ್ಲಾಧಿಕಾರಿಗಳು, ಗದಗ